85-K

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003**

**KARNATAKA SCHOOL EXAMINATION AND ASSESSMENT BOARD**
**6th Cross, Malleshwaram, Bengaluru – 560 003**

## 2025–26 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 3

## S.S.L.C. MODEL QUESTION PAPER - 3 : 2025 - 26

## ವಿಷಯ : ಸಮಾಜವಿಜ್ಞಾನ

## Subject : SOCIAL SCIENCE

**ವಿಷಯ ಸಂಕೇತ : 85-K** | **Subject Code : 85-K**

ಸಮಯ : 3 ಗಂಟೆ 15 ನಿಮಿಷಗಳು ] | [ Time : 3 Hours 15 Minutes

ಗರಿಷ್ಠ ಅಂಕಗಳು : 80 ] | [ Max. Marks : 80

---

**ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :**

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

**I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ / ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದು ಮಾತ್ರ ಸರಿಯಾಗಿದೆ ಅಥವಾ ಹೆಚ್ಚು ಸೂಕ್ತವಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಪೂರ್ಣ ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. 8x1=8**

1. ಬ್ರಿಟಿಷ್ ಆಡಳಿತಾವಧಿಯಲ್ಲಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (SP) ಹುದ್ದೆಯನ್ನು ಸೃಷ್ಟಿಸಿದವನು

A) ವಾರನ್ ಹೇಸ್ಟಿಂಗ್ಸ್

B) ಕಾರ್ನವಾಲೀಸ್

C) ವೆಲ್ಲೆಸ್ಲಿ

D) ಡಾಲ್ ಹೌಸಿ

2. ಕದನ ಸೌಹಾರ್ದತ್ರಯ ಮೈತ್ರಿಕೂಟವನ್ನು ರಚಿಸಿಕೊಂಡ ದೇಶಗಳು

A) ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾ

B) ಇಟಲಿ, ಫ್ರಾನ್ಸ್ ಮತ್ತು ರಷ್ಯಾ

C) ಜರ್ಮನಿ, ಆಸ್ಟ್ರಿಯಾ–ಹಂಗೇರಿ ಮತ್ತು ಇಟಲಿ

D) ಜರ್ಮನಿ, ಆಸ್ಟ್ರೇಲಿಯಾ–ಹಂಗೇರಿ ಮತ್ತು ಇಟಲಿ

3. ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಘದ ಮುಖ್ಯ ಕಛೇರಿ ಇರುವುದು

A) ದೆಹಲಿಯಲ್ಲಿ

B) ಜಿನೇವಾದಲ್ಲಿ

C) ಕಠ್ಮಂಡುವಿನಲ್ಲಿ

D) ನ್ಯೂಯಾರ್ಕಿನಲ್ಲಿ

4. 'ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಅಂಟಿದ ಕಳಂಕ' ಎಂದು ಹೇಳಿದವರು

A) ಡಾ. ಬಿ. ಆರ್. ಅಂಬೇಡ್ಕರ್

B) ಜ್ಯೋತಿಬಾ ಫುಲೆ

C) ಮಹಾತ್ಮ ಗಾಂಧೀಜಿ

D) ಸ್ವಾಮಿ ವಿವೇಕಾನಂದ

5. ಮಾಸಿನ್‌ರಾಮ್ ಅಧಿಕ ಮಳೆ ಪಡೆಯುವ ಪ್ರದೇಶಗಳ ಗುಂಪಿಗೆ ಸೇರಿದೆ, ಏಕೆಂದರೆ

A) ಅದು ಮಳೆ ನೆರಳಿನ ಪ್ರದೇಶದಲ್ಲಿದೆ

B) ಅದು ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗದಲ್ಲಿದೆ

C) ಅದು ಥಾರ್ ಮರುಭೂಮಿ ಮತ್ತು ಅದಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿದೆ

D) ಅದು ವಾರ್ಷಿಕ 250 ಸೆಂ.ಮೀ.ಗಿಂತ ಹೆಚ್ಚು ಮಳೆ ಪಡೆಯುತ್ತದೆ

6. ಚಂದ್ರನ ದಕ್ಷಿಣ ಧ್ರುವದ ಬಳಿ ತನ್ನ ಬಾಹ್ಯಾಕಾಶ ನೌಕೆಯನ್ನು ಇಳಿಸಿದ ಮೊದಲ ದೇಶ

A) ಅಮೆರಿಕ

B) ಚೀನಾ

C) ಜಪಾನ್

D) ಭಾರತ

7. ಸಾಮಾನ್ಯವಾಗಿ ಅಭಿವೃದ್ಧಿಶೀಲ ದೇಶಗಳು ಮಂಡಿಸುವ ಆಯವ್ಯಯ

A) ಉಳಿತಾಯ ಆಯವ್ಯಯ

B) ಸಮತೋಲನ ಆಯವ್ಯಯ

C) ಕೊರತೆ ಆಯವ್ಯಯ

D) ಶೂನ್ಯಾಧಾರಿತ ಆಯವ್ಯಯ

8. ಸಾಮಾನ್ಯವಾಗಿ ಹಿರಿಯ ನಾಗರಿಕರು ಮತ್ತು ಪಿಂಚಣಿದಾರರು ತೆರೆಯುವ ಬ್ಯಾಂಕ್ ಖಾತೆ

A) ಉಳಿತಾಯ ಖಾತೆ

B) ಚಾಲ್ತಿ ಖಾತೆ

C) ಆವರ್ತ ಠೇವಣಿ ಖಾತೆ

D) ನಿಶ್ಚಿತ ಠೇವಣಿ ಖಾತೆ

**II. ಈ ಪ್ರತಿಯೊಂದು ಪ್ರಶ್ನೆಗೆ ಒಂದು ವಾಕ್ಯದಲ್ಲಿ ಉತ್ತರಿಸಿ: 8x1=8**

9. ಮೇಲುಕೋಟೆ ಚೆಲುವ ನಾರಾಯಣ ಸ್ವಾಮಿಗೆ ರಾಜಮುಡಿ ಎಂಬ ಕಿರೀಟವನ್ನು ಅರ್ಪಿಸಿದವರು ಯಾರು?

10. ರಷ್ಯಾ ಜರ್ಮನಿಯೊಂದಿಗೆ ಯುದ್ಧರಹಿತ ಒಪ್ಪಂದ ಮಾಡಿಕೊಂಡಿತು. ಏಕೆ?

11. ನರ್ಮದಾ ಬಚಾವೋ ಆಂದೋಲನವನ್ನು ಯಾವ ರಾಜ್ಯದಲ್ಲಿ ಹಮ್ಮಿಕೊಳ್ಳಲಾಯಿತು?

12. ಕೇರಳ ಸಾಹಿತ್ಯ ಪರಿಷದ್ ನೇತೃತ್ವ ವಹಿಸಿದ್ದ ಪರಿಸರ ಸಂರಕ್ಷಣಾ ಚಳವಳಿಯನ್ನು ಹೆಸರಿಸಿ.

13. ಸಾರಿಗೆ ಎಂದರೇನು?

14. ಆಸಿಯಾನ್ (ASEAN) ದ ಕೇಂದ್ರ ಕಛೇರಿ ಎಲ್ಲಿದೆ?

15. ಅಧಿಕಾರ ವಿಕೇಂದ್ರೀಕರಣ ಎಂದರೇನು?

16. ಉದ್ದಿಮೆದಾರರು ಪ್ರಾಂತೀಯ ತಾರತಮ್ಯವನ್ನು ನಿವಾರಿಸಲು ಸಹಾಯ ಮಾಡುತ್ತಾರೆ. ಹೇಗೆ?

**III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ: 8x2=16**

17. ಪ್ರತ್ಯಕ್ಷ ನೇಮಕಾತಿ ಮತ್ತು ಪರೋಕ್ಷ ನೇಮಕಾತಿಗಳ ನಡುವಿನ ವ್ಯತ್ಯಾಸಗಳಾವುವು?

**ಅಥವಾ**

ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ಕಾರ್ಯಗಳಾವುವು?

18. ಬಾಲಕಾರ್ಮಿಕತೆಯನ್ನು ತಡೆಯುವುದು ಅಗತ್ಯವಾಗಿದೆ. ಏಕೆ?

**ಅಥವಾ**

ನಿರುದ್ಯೋಗವು ಒಂದು ಗಂಭೀರ ಸಾಮಾಜಿಕ ಸಮಸ್ಯೆಯಾಗಿದೆ. ಏಕೆ?

19. ಮೂರನೇ ಆಂಗ್ಲೋ ಮರಾಠಾ ಯುದ್ಧದ ಪರಿಣಾಮಗಳಾವುವು?

20. ಪಾಂಡಿಚೇರಿಯನ್ನು ಫ್ರೆಂಚರಿಂದ ಹೇಗೆ ಮುಕ್ತಗೊಳಿಸಲಾಯಿತು?

21. ಭಾರತದಲ್ಲಿ ವಿವಿಧ ಪ್ರಕಾರದ ನೀರಾವರಿ ಪದ್ಧತಿಗಳು ಬಳಕೆಯಲ್ಲಿವೆ. ಏಕೆ?

22. ಹತ್ತಿ ಬೆಳೆ ಬೇಸಾಯಕ್ಕೆ ಅಗತ್ಯವಾದ ಭೌಗೋಳಿಕ ಅಂಶಗಳಾವುವು?

23. ನೀತಿ ಆಯೋಗದ ಧ್ಯೇಯೋದ್ದೇಶಗಳನ್ನು ವಿವರಿಸಿ.

24. ಗ್ರಾಹಕರ ಶೋಷಣೆಗೆ ಕಾರಣಗಳೇನು?

**IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ: 9x3=27**

25. ಪ್ಲಾಸಿ ಕದನದ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿ.

**ಅಥವಾ**

ಭಾರತದಲ್ಲಿ ಬ್ರಿಟಿಷರು ಜಾರಿಗೆ ತಂದ ರೈತವಾರಿ ಪದ್ಧತಿಯನ್ನು ವಿವರಿಸಿ.

26. ನಿತ್ಯಹರಿದ್ವರ್ಣದ ಅರಣ್ಯಗಳು ಮತ್ತು ಮರುಭೂಮಿ ಅರಣ್ಯಗಳ ನಡುವಿನ ವ್ಯತ್ಯಾಸಗಳಾವುವು?

**ಅಥವಾ**

ರಾಷ್ಟ್ರೀಯ ಹೆದ್ದಾರಿಗಳ ಮಹತ್ವವೇನು?

27. ಗ್ರಾಮೀಣ ಅಭಿವೃದ್ಧಿಯ ಮಹತ್ವವನ್ನು ವಿವರಿಸಿ.

**ಅಥವಾ**

ಸಾರ್ವಜನಿಕ ಹಣಕಾಸು ಮತ್ತು ವೈಯಕ್ತಿಕ ಹಣಕಾಸುಗಳ ನಡುವಿನ ವ್ಯತ್ಯಾಸಗಳನ್ನು ವಿವರಿಸಿ.

28. ಬ್ಯಾಂಕುಗಳು ಸಲ್ಲಿಸುವ ಸೇವೆಗಳಾವುವು?

**ಅಥವಾ**

ಜಿಲ್ಲಾ ಕೈಗಾರಿಕಾ ಕೇಂದ್ರಗಳು ಒದಗಿಸುವ ಸೇವೆಗಳಾವುವು?

29. ಪೆರಿಯಾರ್ ಚಳುವಳಿಯ ಕುರಿತು ಬರೆಯಿರಿ.

30. 1857ರ ಪ್ರಥಮ ಸ್ವಾತಂತ್ರ ಸಂಗ್ರಾಮದ ಪರಿಣಾಮಗಳು ಯಾವುವು?

31. ಭಾರತದ ವಿದೇಶಾಂಗ ನೀತಿಯ ಮೂಲ ತತ್ವಗಳಾವುವು?

32. ಅಸಂಘಟಿತ ವಲಯದ ಕೆಲಸಗಾರರು ಎದುರಿಸುತ್ತಿರುವ ಸವಾಲುಗಳನ್ನು ವಿವರಿಸಿ.

33. ಭೂಕಂಪದ ಪರಿಣಾಮಗಳನ್ನು ವಿವರಿಸಿ.

**V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ: 4x4=16**

34. ನಾಲ್ವಡಿ ಕೃಷ್ಣರಾಜ ಒಡೆಯರ ಆಡಳಿತವು ಮೈಸೂರನ್ನು ಒಂದು ಮಾದರಿ ರಾಜ್ಯವನ್ನಾಗಿ ಮಾಡಿತು, ಸಮರ್ಥಿಸಿ.

**ಅಥವಾ**

ಸತ್ಯಶೋಧಕ ಸಮಾಜವು ಭಾರತೀಯ ಸಮಾಜವನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರವಹಿಸಿತು ಸಮರ್ಥಿಸಿ.

35. ಮಣ್ಣಿನ ಸವೆತವನ್ನು ನಾವು ಹೇಗೆ ತಡೆಗಟ್ಟಬಹುದು?

**ಅಥವಾ**

ಭಾರತದಲ್ಲಿ ಕೈಗಾರಿಕೆಗಳು ಕೆಲವೇ ಪ್ರದೇಶಗಳಲ್ಲಿ ಸ್ಥಾಪಿತಗೊಂಡಿವೆ. ಏಕೆ?

36. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರವನ್ನು ವಿವರಿಸಿ.

37. ಭಾರತದಲ್ಲಿ ಇತ್ತೀಚೆಗೆ ಮಹಿಳೆಯರ ಸ್ಥಾನಮಾನಗಳಲ್ಲಿ ಸುಧಾರಣೆಯಾಗುತ್ತಿದೆ. ಏಕೆ?

**VI. 38. ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಕೆಳಗಿನವುಗಳಲ್ಲಿನ ಯಾವುದಾದರೂ ಐದನ್ನು ಗುರುತಿಸಿ. 5x1=5**

A. ಉತ್ಕಲ ತೀರ

B. ಕರ್ಕಾಟಕ ಸಂಕ್ರಾಂತಿ ವೃತ್ತ

C. ಕನ್ಯಾಕುಮಾರಿ

D. ಕೋಸಿ ಯೋಜನೆ

E. ಸೂರತ್

F. ಕೋಲ್ಕತ

G. ಅರಾವಳಿ ಬೆಟ್ಟಗಳು

H. ಶ್ರೀನಗರ

I. ಕಾನ್ಪುರ್

J. ಲಾತೂರ್

**ದೃಷ್ಟಿ ವಿಕಲ ಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ:**

**(ಪ್ರಶ್ನೆ ಸಂಖ್ಯೆ 38ರ ಬದಲಿಗೆ)**

ಹಿಮಾಲಯ ಪರ್ವತ ಸರಣಿಗಳಿಂದಾಗುವ ಪ್ರಯೋಜನಗಳನ್ನು ವಿವರಿಸಿ.

ಅಥವಾ

ವಿವಿದೋದ್ಧೇಶ ನದಿಕಣಿವೆ ಯೋಜನೆಗಳ ಉದ್ದೇಶಗಳನ್ನು ವಿವರಿಸಿ.